ಸಿಸಿ ಸಂಖ್ಯೆ: 364/2023

**ದಿನಾಂಕ 26.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ದೂರಿನ ಮತ್ತು ಪಂಚನಾಮದ ದೃಢೀಕೃತ ಪ್ರತಿಗಳನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ನಿಪಿ.1 ಮತ್ತು 2 ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಶ್ರೀ ಎಂ.ಆರ್. ವಕೀಲರಿಂದ 1ನೇ ಆರೋಪಿತನ ಪರವಾಗಿ**

ನಾನು ಪಿ.ಯು.ಸಿ. ವರೆಗೆ ವ್ಯಾಸಂಗ ಮಾಡಿದ್ದೇನೆ. ದೂರನ್ನು ನಾನು ಹೇಳಿ ಬರೆಸಿದ್ದೇನೆ. ಅದರಲ್ಲಿರುವ ವಿಷಯಗಳು ನನಗೆ ಗೊತ್ತಿವೆ. 1ನೇ ಆರೋಪಿತನನ್ನು ನ್ಯಾಯಾಲಯದಲ್ಲಿ ಮೊದಲ ಬಾರಿಗೆ ನೋಡಿರುತ್ತೇನೆ ಎಂದರೆ ಆತನನ್ನು ದೇವಸ್ಥಾನಕ್ಕೆ ಪೊಲೀಸರು ಕರೆದುಕೊಂಡು ಬಂದಿದ್ದರು. ದೇವಸ್ಥಾನದಲ್ಲಿ ಯಾರು ಕಳ್ಳತನ ಮಾಡಿದ್ದರು ಎಂದು ನನಗೆ ವೈಯಕ್ತಿ ಮಾಹಿತಿ ಇಲ್ಲ ಎಂದರೆ ಸರಿ, ಪೊಲೀಸರು ಆ ಕುರಿತು ಹೇಳಿರುತ್ತಾರೆ. ಪೊಲೀಸರ ಹೇಳಿಕೆ ಮೇರೆಗೆ ಆರೋಪಿತರು ಕಳವು ಕೃತ್ಯ ಮಾಡಿದ್ದಾರೆಂದು ಹೇಳುತ್ತಿದ್ದೇನೆ ಎಂದರೆ ಸರಿ.

ಘಟನೆಯಾಗುವ ದಿನದ ಹಿಂದಿನ ದಿನ ರಾತ್ರಿ 9.00 ಗಂಟೆಗೆ ದೇವಸ್ಥಾನದ ಬಾಗಿಲನ್ನು ಮುಚ್ಚಲಾಯಿತು. ಆ ರೀತಿ ಮುಚ್ಚುವಾಗ ದೇವಸ್ಥಾನದ ದೇವರ ಮೇಲಿನ ಆಭರಣಗಳನ್ನು ತೆಗೆದು ಬೀರುವಿಗೆ ಇಡಲಾಗಿತ್ತು.

ದೇವಸ್ಥಾನದ ಬಾಗಿಲನ್ನು ಬೆಳಿಗ್ಗೆ 5.30 ರಿಂದ 6.00 ಗಂಟೆಯ ಸಮಯದಲ್ಲಿ ತೆಗೆಯಲಾಗುತ್ತದೆ. ದೇವಸ್ಥಾನದ ಬಾಗಿಲನ್ನು ತೆಗೆಯಲು ಹೋದಾಗ ಆ ಬಾಗಿಲನ್ನು

ತೆಗೆಯಲಾಗಿದೆ ಎಂದು ಪ್ರಾಸಾ-2 ರವರು ನನಗೆ ಹೇಳಿದರು. ನಂತರ ನಾನು ನೋಡಿದಾಗ ಬಾಗಿಲಿನ ಬಳಿ ಬೀಗಗಳು ಚೆಲ್ಲಾಪಿಲ್ಲಿಯಾಗಿದ್ದವು. ಆ ಬೀಗಗಳನ್ನು ಯಾರು ತೆಗೆದಿದ್ದರು ಎಂದು ನಾನು ಘಟನೆಯ ದಿನ ನೋಡಿಲ್ಲ.

ಘಟನೆಯ ವೇಳೆಗೆ ಸಿ.ಸಿ. ಟಿ.ವಿ. ಇತ್ತಾ ಎಂದರೆ ಸಿ.ಸಿ. ಟಿ.ವಿ. ಇತ್ತು, ಅದು ಸುಮಾರು ಎರಡು ವರ್ಷಗಳ ಹಿಂದಿನಿಂದಲೂ ಹಾಳಾಗಿತ್ತು.

ಆರೋಪಿತರು ಮೈಸೂರಿನ ನಿವಾಸಿಗಳು ಎಂದರೆ ನನಗೆ ಗೊತ್ತಿಲ್ಲ. ಆರೋಪಿತರನ್ನು ಪೊಲೀಸರು ಘಟನಾ ಸ್ಥಳಕ್ಕೆ ಕರೆದುಕೊಂಡು ಬಂದಿರಲಿಲ್ಲ ಮತ್ತು ನಾನು ಅವರನ್ನು ನೋಡಿರಲಿಲ್ಲ ಎಂದರೆ ಸರಿಯಲ್ಲ.

ನಾನು ಪಂಚನಾಮದಲ್ಲಿ ಭಾಗವಹಿಸಲು ಪೊಲೀಸರು ನನಗೆ ನೋಟೀಸ್ ನೀಡಿರಲಿಲ್ಲ. ದೇವಸ್ಥಾನದಲ್ಲಿ ಯಾವುದೇ ಆಭರಣ ಕಳವಾಗಿರಲಿಲ್ಲ ಎಂದರೆ ಸರಿಯಲ್ಲ. ಪಂಚನಾಮ ಸ್ಥಳದ ಪೂರ್ವಕ್ಕೆ ಗರುಡುಗಂಭ, ಪಶ್ಚಿಮಕ್ಕೆ ಗೌರಿಗುಡಿ, ಉತ್ತರಕ್ಕೆ ಕೊಳ ಮತ್ತು ದಕ್ಷಿಣಕ್ಕೆ ಹೊಸಹಳ್ಳಿಗೆ ಹೋಗುವ ರಸ್ತೆ ಇವೆ. ಪಂಚನಾಮಕ್ಕೆ ನಾನು, ಚಾಸಾ-5 ಮತ್ತು 6 ರವರು ಸಹಿ ಮಾಡಿರುತ್ತೇವೆ.

ಆರೋಪಿತರು ಆ ದೇವಸ್ಥಾನದಲ್ಲಿ ಕಳವು ಮಾಡಿಲ್ಲ ಎಂದರೆ ಸರಿಯಲ್ಲ. ಅವರು ಮೈಸೂರಿನಲ್ಲಿ ಕೂಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾನು ದೂರನ್ನು ನೀಡಿಲ್ಲ ಮತ್ತು ನನ್ನ ಸಮಕ್ಷಮ ಪಂಚನಾಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಹೇಳಿಕೆ ಮೇರೆಗೆ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಅದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂ., ತಿ.ನರಸೀಪುರ**